|| ಓಂ ||

ಮೃತ್ಯುಮಹೋತ್ಸವ.

ಕನ್ನಡ ಭಾಷಾಂತರ ಸಹಿತ.

ಪ್ರಕಾಶಕರು,

ಅಣ್ಣಪ್ಪಾ ಚೌಗುಲೆ ವಕೀಲ, ಬೆಳಗಾವಿ.

ಬೆಳಗಾಂವಿ "ಶ್ರೀಮಹಾವೀರ" ಮುದ್ರಾಲಯದಲ್ಲಿ ಮುದ್ರಿಸಲ್ಪಟ್ಟಿತು.

ಸನ್ ೧೯೦೯ ಇಸ್ವಿ.

ಕ್ರಯ ೧ ಆಣೆ.

॥ ಶ್ರೀ ॥

ಮೃ ತ್ಯು ಮ ಹೋ ತ್ಸ ವಃ.

ಮೃತ್ಯುಮಾರ್ಗೇ ಪ್ರವೃತ್ತಸ್ಯ ।
ವೀತರಾಗೋ ದದಾತು ಮೇ ॥
ಸಮಾಧಿಬೋಧಪಾಥೇಯಂ ।
ಯಾವನ್ಮುಕ್ತಿಪುರೀ ಪುರಃ ॥ ೧ ॥

ಅರ್ಥ—ಮೃತ್ಯುಮಾರ್ಗದೊಳಗೆ ಪ್ರವರ್ತಿಸುವಂಥ ನನಗೆ ಮೋಕ್ಷವಾಗುವ ತನಕ ಸಮಾಧಿಬೋಧ (ಸ್ವರೂ ಜ್ಞಾನ ಅಥವಾ ಆತ್ಮಜ್ಞಾನ)ವೆಂಬ ಪಾಥೇಯವನ್ನು ಉಪಕಾರಕ ವಸ್ತು ಅಥವಾ ಬುತ್ತೀಗಂಟು) ಶ್ರೀ ೀತರಾಗ ಪರಮ ದೇವರು ಕೊಡಲಿ.

ಕೃಮಿಜಾಲಶತಾಕೀರ್ಣೇ ।
ಜರ್ಜರೇ ದೇಹಪಂಜರೇ ॥

ಭಜ್ಯಮಾನೇ ನ ಭೇತವ್ಯಂ ।
ಯತಸ್ತ್ವಂ ಜ್ಞಾನವಿಗ್ರಹಃ ॥ ೨ ॥

ಅರ್ಥ— ಎಲೈ ಆತ್ಮನೇ, ಅನೇಕ ಜೀವಜಂತುಗಳಿಂದ ತುಂಬಿದ ದೇಹವೆಂಬ ಜೀರ್ಣವಾದ ಪಂಜರವು (ಮನೆಯು) ನಾಶಹೊಂದುವಾಗ ನೀನು ಅಂಜಬೇಡ; ಯಾಕಂದರೆ, ನಿನಗೆ ಜ್ಞಾನವೆಂಬ ಶರೀರವುಂಟು.

ಜ್ಞಾನಿನ್ ಭಯಂ ಭವೇತ್ಕಸ್ಮಾತ್–।
ಪ್ರಾಪ್ತೇ ಮೃತ್ಯುಮಹೋತ್ಸವೇ ॥
ಸ್ವರೂಪಸ್ಥಃ ಪುರಂ ಯಾತಿ ।
ದೇಹೀ ದೇಹಾಂತರಸ್ಥಿತಿಮ್ ॥ ೩ ॥

ಅರ್ಥ— ಎಲೈ ಜ್ಞಾನಿಯೇ, ನಿನಗೆ ಮೃತ್ಯುವೆಂಬ ಮಹೋತ್ಸವವು ಒದಗಿದರೆ ನೀನು ಯಾಕೆ ಅಂಜಬೇಕು? ಸ್ವರೂಪದಲ್ಲಿದ್ದ ಆತ್ಮನು (ಒಂದು ದೇಹವನ್ನು ಬಿಟ್ಟು,) ಉತ್ತಮವಾದ ಇನ್ನೊಂದು ದೇಹ

ವನ್ನು ಪಡಕೊಳ್ಳಲಿಕ್ಕೆ ಮುಂದೆ ಸಾಗುತ್ತಾನೆ.

ಸುರತ್ವಂ ಪ್ರಾಪ್ಯತೇ ಯಸ್ಮಾತ್ ।
ದೃಶ್ಯತೇ ಪೂರ್ವಸತ್ತಮೈಃ ॥
ಭುಜ್ಯತೇ ಸ್ವರ್ಭವಂ ಸೌಖ್ಯಂ ।
ಮೃತ್ಯುಭೀತಿಃ ಕುತಃ ಸತಾಮ್ ॥ ೪ ॥

ಅರ್ಥ— ಯಾಕಂದರೆ ಅದರಿಂದ ಸ್ವರ್ಗವನ್ನು ಪಡೆದು, ಸ್ವರ್ಗದೊಳಗಿನ ಸುಖವನ್ನು ಆತ್ಮನು ಅನುಭವಿಸುತ್ತಾನೆಂದು ಪೂರ್ವಕಾಲದ ಕೇವಲಿಗಳಿಂದ ಹೇಳಲ್ಪಟ್ಟದೆ; ಆದ್ದರಿಂದ ಸಜ್ಜನರಿಗೆ ಮರಣದ ಭಯವು ಯಾಕೆ?

ಆಗರ್ಭಾದ್ದುಃಖಸಂತಪ್ತಃ ।
ಪ್ರಕ್ಷಿಪ್ತೋ ದೇಹಪಂಜರೇ ॥
ನಾತ್ಮಾ ವಿಮುಚ್ಯತೇನ್ಯೇನ ।
ಮೃತ್ಯುಭೂಮಿಪತಿಂ ವಿನಾ ॥ ೫ ॥

ಅರ್ಥ— ಗರ್ಭಕಾಲದಿಂದ ದುಃಖವನ್ನು ಉಂಡು, ದೇಹವೆಂಬ ಜೀರ್ಣ ಮನೆಯಲ್ಲಿ ಸೇರಿದ ಆತ್ಮನು ಮೃತ್ಯುವೆಂಬ ಮಹಾರಾಜನ ಹೊರ್ತು ಪರರಿಂದ ಬಿಡುಗಡೆಯನ್ನು ಹೊಂದಲಾರನು.

ಸರ್ವದುಃಖಪ್ರದಂ ಪಿಂಡಂ ।
ದುರೀಕೃತ್ವಾತ್ಮದರ್ಶಿಭಿಃ ॥
ಮೃತ್ಯುಮಿತ್ರಪ್ರಸಾದೇನ ।
ಪ್ರಾಪ್ಯಂತೇ ಸುಖಸಂಪದಃ ॥ ೬ ॥

ಅರ್ಥ— ಆತ್ಮದರ್ಶಿಗಳು (ಆತ್ಮಜ್ಞಾನಿಗಳು) ಮೃತ್ಯುವೆಂಬ ಮಿತ್ರನ ಅನುಗ್ರಹದಿಂದ ಸಕಲ ದುಃಖಕರನಾದ ದೇಹಪಿಂಡವನ್ನು ಚಲ್ಲಿಕೊಟ್ಟು, (ನಿರಾಕರಿಸಿ ಅಥವಾ ಧಿಕ್ಕರಿಸಿ) ಸುಖಸಂಪತ್ತುಗಳನ್ನು ಪಡೆಯುತ್ತಾರೆ.

ಮೃತ್ಯುಕಲ್ಪದ್ರುಮೇ ಪ್ರಾಪ್ತೇ ।
ಯೇನಾತ್ಮಾರ್ಥೋ ನ ಸಾಧಿತಃ ॥
ನಿಮಗ್ನೋ ಜನ್ಮಜಂಬಾಲೇ ।
ಸ ಪಶ್ಚಾತ್ಕಿಂ ಕರಿಷ್ಯತಿ ॥ ೭ ॥

ಅರ್ಥ— ಮೃತ್ಯುವೆಂಬ ಕಲ್ಪವೃಕ್ಷವು ಪ್ರಾಪ್ತವಾದಾಗ್ಯೂ ತಮ್ಮ ಆತ್ಮಕಲ್ಯಾಣವನ್ನು ಮಾಡಿಕೊಳ್ಳದ ಜೀವಗಳು ಜನ್ಮಮರಣವೆಂಬ ಕೆಸರಿನಲ್ಲಿ ಮುಳುಗಿ ತೊಳಲಾಡುವವು; ಹಾಗಾದ ಮೇಲೆ ಅವುಗಳಿಂದ ಆತ್ಮಕಾರ್ಯವಾಗುವ ಬಗೆಯೇನು!

ಜೀರ್ಣಂ ದೇಹಾದಿಕಂ ಸರ್ವಂ ।
ನೂತನಂ ಜಾಯತೇ ಯತಃ ॥
ಸ ಮೃತ್ಯುಃ ಕಿಂ ನ ಮೋದಾಯ ।
ಸತಾಂ ಸಾತಾ ಸ್ಥಿತಿರ್ಯತಃ ॥ ೮ ॥

ಅರ್ಥ— ಯಾವ ಮೃತ್ಯುವಿನಿಂದ ಈ ಜೀರ್ಣವಾದ ದೇಹಾದಿಗಳು ತಪ್ಪಿ, ಹೊಸದೇಹವು ಪ್ರಾಪ್ತವಾಗುತ್ತದೆ ಯೋ ಆ ಮರಣವು ಸಾತಾವೇದನೀಯವೆಂಬ ಪುಣ್ಯೋ ದಯಕ್ಕೆ ಕಾರಣವಾಗಿ ಸಜ್ಜನರಿಗೆ ಆನಂದಕರವಾಗು ವದಿಲ್ಲವೋ?

ಸುಖಂ ದುಃಖಂ ಸದಾ ವೇತ್ತಿ ।
ದೇಹಸ್ಥಶ್ಚ ಸ್ವಯಂ ವ್ರಜೇತ್ ॥
ಮೃತ್ಯುಭೀತಿಸ್ತದಾ ಕಸ್ಯ ।
ಜಾಯತೇ ಪರಮಾರ್ಥತಃ ॥ ೯ ॥

ಅರ್ಥ— ದೇಹದೊಳಗಿದ್ದ ಆತ್ಮನು ಸುಖದು:ಖಗ ಳನ್ನು ಯಾವಾಗಲೂ ತಿಳಿಯುತ್ತಾನೆ; ಹಾಗು ಪರಲೋ ಕಕ್ಕೆ ತಾನೇ ಗಮನಮಾಡುತ್ತಾನೆ; ಅಂದ ಮೇಲೆ ಪರ ಮಾರ್ಥದಿಂದ ನೋಡಿದರೆ ಮರಣದ ಭಯವು ಯಾರಿಗೂ ಇರಬಾರದು.

ಸಂಸಾರಾಸಕ್ತಚಿತ್ತಾನಾಂ ।
ಮೃತ್ಯುರ್ಭೀತ್ಯೈ ಭವೇನ್ನೃಣಾಮ್ ॥
ಮೋದಾಯತೇ ಪುನಃ ಸೋಽಪಿ ।
ಜ್ಞಾನವೈರಾಗ್ಯವಾಸಿನಾಮ್ ॥ ೧೦ ॥

ಅರ್ಥ— ಸಂಸಾರದೊಳಗೆ ಲಂಪಟರಾದವರ ಮನಸ್ಸಿನಲ್ಲಿ ಮರಣದ ಭಯವು ಹುಟ್ಟುತ್ತದೆ; ಆದರೆ ಅದೇ ಮರಣವು ಜ್ಞಾನ ಮತ್ತು ವೈರಾಗ್ಯ ಮುಂತಾದವುಗಳಲ್ಲಿ ಮಗ್ನರಾದವರಿಗೆ ಆನಂದಕರವಾಗುತ್ತದೆ.

ಪುರಾಧೀಶೋ ಯದಾ ಯಾತಿ ।
ಸುಕೃತಸ್ಯ ಬುಭುತ್ಸಯಾ ॥
ತದಾಸೌ ವಾರ್ಯತೇ ಕೇನ ।
ಪ್ರಪಂಚೈಃ ಪಂಚಭೌತಿಕೈಃ ॥ ೧೧ ॥

ಅರ್ಥ— ತಾನು ಮಾಡಿದ ಪುಣ್ಯಫಲಗಳನ್ನು ಭೋ
ಗಿಸುವ ಅಭಿಲಾಷೆಯಿಂದ ಆತ್ಮನು ಪರಲೋಕಕ್ಕೆ ಸಾ
ವಾಗ್ಗೆ ಪಂಚಮಹಾಭೂತಮಯುವಾದ ದೇಹಾದಿ
ಳಿಂದ ನಿಗ್ರಹಿಸಲ್ಪಡುವನೋ? (ಅವನನ್ನು ಪ್ರತಿಬಂ
ಸಲಿಕ್ಕೆ ಯಾರೂ ಸಮರ್ಥರಲ್ಲ ಎಂಬ ತಾತ್ಪರ್ಯವು.)

ಮೃತ್ಯುಕಾಲೇ ಸತಾಂ ದುಃಖಂ ।
ಯದ್ಭವೇತ್ ವ್ಯಾಧಿಸಂಭವಮ್ ॥
ದೇಹಮೋಹವಿನಾಶಾಯ ।
ಮನ್ಯೇ ಶಿವಸುಖಾಯ ಚ ॥ ೧೨ ॥

ಅರ್ಥ—ಮರಣ ಸಮಯದಲ್ಲಿ ಸಜ್ಜನರಿಗೆ ವ್ಯಾ
ಯಿಂದ ಉಂಟಾದ ದುಃಖವು ದೇಹದ ಮೋಹವನ್ನು
ಕೆಡಿಸಿ, ಮೋಕ್ಷಸುಖವನ್ನು ಕೊಡುವದಕ್ಕೆ ಉತ್ಪ
ವಾಗುತ್ತದೆಂದು ನಾನು ನಂಬುತ್ತೇನೆ.

ಜ್ಞಾನಿನೋಽಮೃತಸಂಗಾಯ ।
ಮೃತ್ಯುಸ್ತಾಪಕರೋಽಪಿ ಸನ್ ॥
ಆಮಕುಂಭಸ್ಯ ಲೋಕೇಽಸ್ಮಿನ್ ।
ಭವೇತ್ಪಾಕವಿಧಿರ್ಯಥಾ ॥ ೧೩ ॥

ಅರ್ಥ— ಬೆಂಕಿಯಲ್ಲಿ ಸುಡದೇ ಇದ್ದ ಮಣ್ಣಿನ ಪಾತ್ರೆಯೊಳಗೆ ಈ ಲೋಕದಲ್ಲಿ ಹ್ಯಾಗೆ ಅಡಿಗೆಯಾಗುವದಿಲ್ಲವೋ ಹಾಗೆ ದುಃಖವನ್ನು ಉಂಟುಮಾಡುವಂಥ ಮರಣವು ಜ್ಞಾನಿಗೆ ಒದಗಿದಾಗ್ಯೂ ಅದು ಅವನಿಗೆ ಅಮೃತದ ಪ್ರಾಪ್ತಿಯನ್ನು ಮಾಡಿಕೊಡುತ್ತದೆ. (ಮಧುರ ರಸವುಳ್ಳ ಪಕ್ವಾನ್ನವಾಗಬೇಕಾದರೆ ಅದನ್ನು ಸುಟ್ಟ ಪಾತ್ರೆಯಲ್ಲಿಯೇ ಮಾಡಬೇಕಾಗುತ್ತದೆ; ಅದರಂತೆ ಮರಣಕಾಲದಲ್ಲಿ ದುಃಖದ ಸಂತಾಪವನ್ನು ಧೈರ್ಯದಿಂದ ಸಹಿಸುವ ಜೀವವು ಸುಖವನ್ನು ಪಡೆಯುತ್ತದೆಂಬ ತಾತ್ಪರ್ಯವು.)

ಯತ್ಫಲಂ ಪ್ರಾಪ್ಯತೇ ಸದ್ಭಿ- ।
ರ್ವ್ರತಾಯಾಸವಿಡಂಬನಾತ್ ॥
ತತ್ಫಲಂ ಸುಖಸಾಧ್ಯಂ ಸ್ಯಾ- ।
ನ್ಮೃತ್ಯುಕಾಲೇ ಸಮಾಧಿನಾ ॥ ೧೪ ॥

ಅರ್ಥ— ವ್ರತಗಳನ್ನು ಪಾಲಿಸುವ ಶ್ರಮದಿಂದ ಸಜ್ಜ
ನರಿಗೆ ಒದಗುವ ಫಲವು ಮೃತ್ಯುಕಾಲದಲ್ಲಿ ಸಮಾ
ಧಿಮರಣದಿಂದ ಸುಲಭವಾಗಿ ಪ್ರಾಪ್ತವಾಗುತ್ತದೆ.

ಅನಾರ್ತ್ತಃ ಶಾಂತಿಮಾನ್ಮರ್ತ್ಯೋ ।
ನ ತಿರ್ಯಙ್ನಾಪಿ ನಾರಕಃ ॥
ಧರ್ಮಧ್ಯಾನೀ ಪುರೋ ಮರ್ತ್ಯೋ- ।
ನಶನೀ ತ್ವಮರೇಶ್ವರಃ ॥ ೧೫ ॥

ಅರ್ಥ— ಮರಣಸಮಯದಲ್ಲಿ ಆರ್ತಧ್ಯಾನವನ
ಬಿಟ್ಟು, ಸಮತಾಭಾವವನ್ನು ಧರಿಸಿ, ಧರ್ಮಧ್ಯಾನದ

ಗ್ನನಾಗಿ, ಎಲ್ಲ ಆಹಾರವನ್ನು ಬಿಟ್ಟುಕೊಟ್ಟು, ಸಾ
ಯುವ ಮನುಷ್ಯನು ದೇವೇಂದ್ರನಾಗುತ್ತಾನೆ.

ತಪ್ತಸ್ಯ ತಪಸಶ್ಚಾಪಿ ।
ಪಾಲಿತಸ್ಯ ವ್ರತಸ್ಯ ಚ ॥
ಪಠಿತಸ್ಯ ಶ್ರುತಸ್ಯಾಪಿ ।
ಫಲಂ ಮೃತ್ಯುಃ ಸಮಾಧಿನಾ ॥ ೧೬ ॥

ಅರ್ಥ— ತಪಶ್ಚರಣವನ್ನು ಆಚರಿಸುವದರಿಂದಲೂ
ವ್ರತಗಳನ್ನು ಪಾಲಿಸವದರಿಂದಲೂ ಶಾಸ್ತ್ರಗಳನ್ನು ಪಠನ
ಮಾಡುವದರಿಂದಲೂ ಉಂಟಾಗುವ ಫಲವು ಸಮಾಧಿ
ಮರಣದಿಂದಲೇ ಪ್ರಾಪ್ತವಾಗುತ್ತದೆ.

ಅತಿಪರಿಚಿತೇಷ್ವವಜ್ಞಾ ।
ನವೇ ಭವೇತ್ಪ್ರೀತಿರಿತಿ ಹಿ ಜನವಾದಃ ॥
ಚಿರತರಶರೀರನಾಶೇ ।
ನವತರಲಾಭೇ ಚ ಕಿಂ ಭೀರುಃ ॥ ೧೭ ॥

ಅರ್ಥ— ಒಂದೇ ವಸ್ತುವನ್ನು ಬಹುಕಾಲ ಸೇ
ಸಿದರೆ (ಅಭ್ಯಾಸದಿಂದ) ಅದು ಬೇಸರಾಗುತ್ತದೆ. ಮ
ಮನುಷ್ಯನು ಹೊಸ ಹೊಸ ಒಡವೆಗಳಲ್ಲಿ ಪ್ರೀತಿಯು
ಳ್ಳವನಾಗುತ್ತಾನೆ ಎಂದು ಜನರು ನಂಬುತಾರೆ. ಅ
ಮೇಲೆ ಬಹುಕಾಲದಿಂದ ಭೋಗಿಸಿದ ಶರೀರವು ನಾ
ವನ್ನು ಹೊಂದಿ ಹೊಸ ಶರೀರವು ಪ್ರಾಪ್ತವಾದ
ಅಂಜಿಕೆ ಯಾಕೆ?

ಸ್ವರ್ಗಾದೇತ್ಯ ಪವಿತ್ರನಿರ್ಮಲಕುಲೇ ಸಂಸ್ಮ-
ರ್ಯಮಾಣಾ ಜನ್ಯೈ- । ದತ್ವಾ ಭಕ್ತಿವಿಧಾ-
ಯಿನಾಂ ಬಹುವಿಧಂ ವಾಂಛಾನುರೂಪಂ
ಧನಮ್ ॥ ಭುಕ್ತ್ವಾ ಭೋಗಮಹರ್ನಿಶಂ
ಪರಕೃತಂ ಸ್ಥಿತ್ವಾ ಕ್ಷಣಂ ಮಂಡಲೇ । ಪಾ-
ತ್ರಾವೇಶವಿಸರ್ಜನಾಮಿವ ಮೃತಿಂ ಸಂತೋ
ಲಭಂತೇ ಸ್ವತಃ ॥ ೧೮ ॥

ಅರ್ಥ—ಅನೇಕ ಜನರಿಂದ ಚಿಂತಿಸಲ್ಪಟ್ಟು, ಸ್ವರ್ಗದಿಂದ ಭೂಲೋಕದೊಳಗೆ ನಿರ್ಮಲ ಕುಲದಲ್ಲಿ ಜನಿಸಿ, ಸೇವಕರಿಗೆ ಮತ್ತು ಮಿತ್ರರಿಗೆ ಅವರವರ ಇಚ್ಛೆಯ ಪ್ರಕಾರ ದ್ರವ್ಯವನ್ನು ಕೊಟ್ಟು, ಹಗಲಿರಳು ಅನ್ಯ ಪುಣ್ಯಗಳಿಂದುಂಟಾದ ಭೋಗಗಗಳನ್ನು ಅನುಭವಿಸುತ್ತ ಕಡೆಗೆ ಸ್ವಲ್ಪಕಾಲವಾದರೂ ವೀತರಾಗ ಸ್ವರೂಪವನ್ನು ಧರಿಸಿ, ರಂಗಭೂಮಿಯಲ್ಲಿ ನಟನು ಸ್ವಲ್ಪಕಾಲ ಕುಣಿದು, ಎಲ್ಲರ ಚಿತ್ತನ್ನು ರಂಜಿಸಿ, ಅದೃಶ್ಯವಾಗುವಂತೆ ಸಜ್ಜನರು ಮರಣವನ್ನು ಹೊಂದುತ್ತಾರೆ.

ಮೃತ್ಯುಮಹೋತ್ಸವಃ

ಸಮಾಪ್ತಃ

